ರೇಷ್ಮೆಗೆ ತಗಲುವ ಊಜಿ ನೊಣ ನಿವಾರಣೆ

991 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರೇಷ್ಮೆಗೆ ತಗಲುವ ಊಜಿನೊಣ ನಿವಾರಣೆಗೆ ಸರ್ಕಾರ ಏನು ಕ್ರಮಕೈಗೊಂಡಿದೆ?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು) :

1. ಹುಳು ಸಾಕುವ ಕೊಠಡಿಗಳಲ್ಲಿ ನೈಲಾನ್ ಬಲೆಯನ್ನು ಉಪಯೋಗಿಸುವುದು.
2. ಹುಳು ಸಾಕಣೆ ತಟ್ಟೆಗಳನ್ನು ನೈಲಾನ್ ಬಲೆಗಳಿಂದ ಮುಚ್ಚುವುದು.
3. ಹುಳು ಸಾಕಾಣಿಕೆ ಮನೆಯ ಕಿಟಕಿ ಬಾಗಿಲುಗಳಿಗೆ ತಂತಿ ಜಾಲರಿ ಅಳವಡಿಸುವುದು.
4. ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಊಜಿನೊಣದ ಮೆಗಾಟ್ಸ್‌ಗಳನ್ನು ಸಂಗ್ರಹಿಸಿ ಬಿಸಿ ನೀರಿನಲ್ಲಿ ಸಾಯಿಸುವುದು.
5. ಊಜಿ ನೊಣದ ಮೆಗಾಟ್‌ಗಳು ಇರತಕ್ಕಂಥ ಹುಳುಗಳನ್ನು ಆಯ್ದು ಸಾಯಿಸುವುದು.
6. ಊಜಿ ಸೈಡ್ ಮತ್ತು ಚೈನಾ ಕ್ಲೇಗಳನ್ನು ಸಹ ರೇಷ್ಮೆ ಹುಳುಗಳ ಮೇಲೆ ಚುಮುಕಿಸಲು ತಿಳುವಳಿಕೆ ಕೊಡಲಾಗುತ್ತಿದೆ.

ಸರ್ಕಾರಿ ನೌಕರರನ್ನು ವರ್ಗಾವರ್ಗಿ ಮಾಡುವ ಬಗ್ಗೆ ನೀತಿ ನಿಯಮಗಳು

987 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

ಅ) ಸರ್ಕಾರಿ ನೌಕರರನ್ನು ವರ್ಗಾವರ್ಗಿ ಮಾಡುವ ಬಗ್ಗೆ ಏನಾದರೂ ನೀತಿ ನಿಯಮಗಳನ್ನು ಹಾಕಿಕೊಂಡಿದೆಯೇ?

ಆ) ವರ್ಷದ ಮಧ್ಯದಲ್ಲಿ ಯಾರನ್ನು ಬೇಕಾದರೂ ವರ್ಗ ಮಾಡಬಹುದೇ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಆಡಳಿತಾತ್ಮಕ ದೃಷ್ಟಿಯಿಂದ ವರ್ಗಾವಣೆ ಮಾಡಲಾಗುವುದು.

ಕನ್ನಡ ಚಿತ್ರಗಳ ಬೆಳವಣಿಗೆಯ ಬಗ್ಗೆ ಸರ್ಕಾರ ಕೈಗೊಂಡ ಕ್ರಮ

988 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕನ್ನಡ ಚಿತ್ರಗಳ ಬೆಳವಣಿಗೆಯ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಎಷ್ಟು ಕನ್ನಡ ಚಲನಚಿತ್ರಗಳಿಗೆ ಇಮವರೆವಿಗೆ ಸರ್ಕಾರ ಸಹಾಯಧನ ನೀಡದೆ, ಬಾಕಿ ಉಳಿಸಿಕೊಂಡಿದೆ ?

ಇ) ಕಡ್ಡಾಯ ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ಇದುವರೆಗೆ ಏತಕ್ಕೆ ಕಾನೂನು ಮಾಡಿಲ್ಲ ?

ಈ) ಡಬ್ಬಿಂಗ್ ಕನ್ನಡ ಚಿತ್ರಗಳಿಗೆ ಸಹಾಯಧನ ನಿಲ್ಲಿಸುವ ಬಗ್ಗೆ ಸರ್ಕಾರ ಯೋಚಿಸಿದೆಯೆ?

ಉ) ಕನ್ನಡ ಸಾಹಿತ್ಯ, ಸಂಸ್ಕೃತಿ ಭಾಷೆಗೆ ಅಗೌರವ ತರುವ ಚಿತ್ರಗಳಿಗೆ ಸಹಾಯ ಧನ ನಿಲ್ಲಿಸುವ ಬಗ್ಗೆ ಸರ್ಕಾರ ಆಲೋಚಿಸಿದೆಯೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):